# ಶರ್ಮರು

## ಸ. ವೆಂಕಟಾಚಲಪತಿ

ಶ್ರೀ ಡಿ.ವಿ.ಜಿ.ಯವರು, ಶ್ರೀ ರಂಗನಾಥಶರ್ಮ ಅವರಿಗೂ ನನಗೂ ನಡುವೆ ಒಂದು ಕೊಂಡಿಯಾಗಿದ್ದುಕೊಂಡು ನನ್ನ ಬದುಕಿಗೊಂದು ದಿಕ್ಕನ್ನೂ ಸ್ವಾರಸ್ಯವನ್ನೂ ಕೃಪೆ ಮಾಡಿದರು. ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುವುದು ಗಣಪತಿಯನ್ನು ಕುರಿತ ಒಂದು ಸ್ತೋತ್ರ.

ವ್ಯಾಸರಿಗೆ ಆತ ಬಲಗೈಯಾಗಿ ಅವರು ಹೇಳಿದ್ದನ್ನು ಬರೆದುಕೊಳ್ಳುವನು. ಗಣಪತಿಯ ಕೈಯ ಓಟವನ್ನು ಕಂಡು ವ್ಯಾಸರು ಗಾಬರಿಯಾಗಿ ಅವನ ಓಟವನ್ನು ಕಡಿಮೆ ಮಾಡಲು ಕೆಲವು ಗುಟ್ಟುಗಳನ್ನು ಅಳವಡಿಸಿ, ಗಣಪತಿ ಅದನ್ನು ಅರ್ಥ ಮಾಡಿಕೊಂಡು ಬರೆಯುವ ಹೊತ್ತಿಗೆ ಮುಂದಿನ ಭಾಗವನ್ನು ರಚಿಸಿ ಹೇಳುತ್ತಿದ್ದರು. ಇದನ್ನು ವ್ಯಾಸ ಗುಟ್ಟು ಎಂದು ಕರೆಯುತ್ತಾರೆ.

ಶ್ರೀ ರಂಗನಾಥಶರ್ಮಾ ಅವರು ಈ ಗುಟ್ಟು ಪದ್ಯಗಳನ್ನು ಕೆಲಕಾಲದ ಹಿಂದೆ ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಈಗ ಮರಳಿ ಅದನ್ನು ಪ್ರತ್ಯೇಕವಾಗಿ ಒಂದು ಪುಸ್ತಕವಾಗಿ ಪ್ರಕಟಿಸಬೇಕೆಂದು ಬೇಡುತ್ತೇನೆ.

ವ್ಯಾಸ ಗುಟ್ಟುಗಳನ್ನು ಪತ್ತೆಮಾಡಬೇಕಾದರೆ ಶರ್ಮರು ಮಹಾಭಾರತವನ್ನು ಕರತಲಾಮಲಕವನ್ನಾಗಿ ಮಾಡಿಕೊಂಡಿರಬೇಕೆಂದು ನನಗನ್ನಿಸುತ್ತದೆ. ಅವರು ಶ್ರೀಮದ್ರಾಮಾಯಣವನ್ನೂ ಹಾಗೆಯೇ ವಾಚೋವಿಧೇಯವನ್ನಾಗಿ ಮಾಡಿ ಕೊಂಡಿದ್ದಾರೆ. ಅವರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವಂತೂ ಅತ್ಯಂತ ಜನಪ್ರಿಯವಾಗಿದೆ. ಅವರು ಅನುಬಂಧಗಳಲ್ಲಿ ಟಿಪ್ಪಣಿಯಾಗಿ ಕೊಡುವ ವಿವರಗಳಂತು ನನ್ನಂಥ ಪಾಮರನನ್ನು ಅಪ್ರತಿಭನನ್ನಾಗಿ ಮಾಡುತ್ತವೆ.

ಅವರನ್ನು ಕೊಂಡಾಡುವ ನಾನು ಕೇವಲ ನಿಮಿತ್ತ ಮಾತ್ರನು. ಕೈಲಾಸಂ ಹೇಳುವ ಹಾಗೆ ನಾನು 'ಕೇವಲಮ್ಮ' ಇದನ್ನು ನಾನು ವಿನೋದಕ್ಕಾಗಿ ಇಲ್ಲಿ ಹೇಳುತ್ತಿಲ್ಲ. ವಾಸ್ತವಾಂಶವನ್ನು ಹೇಳಲು ಹೊರಟ ನನಗೆ ನಾಣೇಕೆ ?

ಶ್ರೀಮಾನ್ ಶರ್ಮರು ಧೀಮಂತರು. ಅವರು ಪಂಡಿತ ಪಾಮರರಿಬ್ಬರನ್ನು ಸಂತೋಷಪಡಿಸತಕ್ಕವರು. ಅವರನ್ನು ಅಭಿನಂದಿಸುವ ಕಾರ್ಯ ಬಹು ಶ್ಲಾಘ್ಯವಾದದ್ದು ಶ್ರೀ ತ್ಯಾಗರಾಜ ಸ್ವಾಮಿಗಳು ಹೇಳಿದಂತೆ "ತೊಲಿ ಜೇಸಿನ ಪೂಜಾಫಲಮು"